**Crl.Misc. No.2010/2025**

PW -1

ಸಾಕ್ಷಿಯು ದಿನಾಂಕಃ 22-01-2026 ರಂದು ವಿಚಾರಣೆಗಾಗಿ ಹಾಜರಾಗಿದ್ದು, ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ ಎ ಎಂ ಜೆ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಗೆ ನಾನೇ ಮಾಹಿತಿ ನೀಡಿದ್ದು ಅದರಲ್ಲಿರುವ ವಿಷಯಗಳು ಸತ್ಯವಾಗಿವೆ ಮತ್ತು ಸಹಿ ನನ್ನದೇ ಆಗಿದೆ.

ಎದುರುದಾರರು ನೀಡಿರುವ ಅಲಭ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿ.ಪಿ.- 1 ಎಂದು ಗುರುತಿಸಲಾಯಿತು. ಶ್ರೀಪತಿ ಆಸ್ಪತ್ರೆ ಮತ್ತು ನನ್ನ ಮಗನ ಶಾಲೆಯವರು ನೀಡಿರುವ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿ.ಪಿ.- 2 ಮತ್ತು 3 ಎಂದು ಗುರುತಿಸಲಾಯಿತು. ನನ್ನ ಮತ್ತು ನನ್ನ ಗಂಡನ ಮೂಲ ಆಧಾರ ಕಾರ್ಡ ಹಾಜರು ಪಡಿಸಿರುತ್ತೇನೆ. ಅದನ್ನು ನೋಡಿ ಅದರ ನೋಟರೈಜ್ಡ ಪ್ರತಿಯನ್ನು ನಿಪಿ 4 ಮತ್ತು 5 ಎಂದು ಗುರುತಿಸಲಾಯಿತು. (ಮೂಲ ಪ್ರತಿಯನ್ನು ನೋಡಿ ವಾಪಸ್ಸು ನೀಡಲಾಗಿದೆ.)

ಆದ್ದರಿಂದ, ಅರ್ಜಿಯಲ್ಲಿ ಕೋರಿರುವಂತೆ ಆದೇಶಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ**

ಎದುರುದಾರರು ಎಕ್ಸ್ ಪಾರ್ಟಿ ಇರುವ ಕಾರಣ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.